(ಸಭೆಯು ಬೆಳಿಗ್ಗೆ 11.09 ಗಂಟೆಗೆ ಪ್ರಾರಂಭಗೊಂಡಿತು, ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

1. ಕಾವೇರಿ ನದಿ ನೀರಿನ ವಿವಾದದ ಬಗ್ಗೆ ಸುಪ್ರೀಂಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಚರ್ಚೆಗೆ ಅವಕಾಶ ನೀಡಲು ಕೋರಿಕೆ.

ಅಧ್ಯಕ್ಷರು:– ಸಂತಾಪ ಸೂಚನೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಈಗ ಕಾವೇರಿ ವಿಷಯವಾಗಿ ಐ ತೀರ್ಪು ಬಂದಿರುವುದರಿಂದ ಇದರ ಬಗ್ಗೆ ಚರ್ಚೆ ಆಗಬೇಕು. ಇಂದಿನ ಕಾರ್ಯಕಲಾಪಗಳನ್ನೆಲ್ಲಾ ಮುಂದಕ್ಕೆ ಹಾಕಿ.

ಅಧ್ಯಕ್ಷರು:– ಈಗ ಸಂತಾಪ ಸೂಚನೆ ಆಗಲಿ..

ಶ್ರೀ ಹೆಚ್.ಡಿ. ರೇವಣ್ಣ:– ಇದು ಆದ ತಕ್ಷಣ ಈ ವಿಷಯವನ್ನು ಮೊದಲು ತೆಗೆದುಕೊಳ್ಳಬೇಕು, ಏಕೆಂದರೆ ಇವತ್ತು ರಾಜ್ಯಕ್ಕೆ ಇದು ಮರಣ ಶಾಸನವಾಗಿದ್ದು, ಇದರಲ್ಲಿ ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡಬೇಕಾಗಿದೆ. ತಾವು ದಯಮಾಡಿ ಈ ವಿಷಯವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಸಂತಾಪ ಸೂಚನೆ ಆದ ಮೇಲೆ ಕಾವೇರಿ ವಿಷಯವಾಗಿ Judgement ಆಗಿರುವುದರ ಬಗ್ಗೆ ಮಾತನಾಡಬೇಕಾಗಿದೆ.

ಅಧ್ಯಕ್ಷರು:– ಆಯಿತು, ಈಗ ಸಂತಾಪ ಸೂಚನೆ ಮುಗಿಯಲಿ, ಆಮೇಲೆ ಈ ವಿಷಯವಾಗಿ ಮಾತನಾಡಿ.

ಶ್ರೀ ಎನ್. ಸಂಪಂಗಿ:– ಮಾನ್ಯ ಅಧ್ಯಕ್ಷರೆ, ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇಲ್ಲ, ಮಾನ್ಯ ಮಂತ್ರಿಗಳು ಇಲ್ಲ, ರಾಜ್ಯದಲ್ಲಿ ಬರವಿದೆ, ನೀರಿನ ಸಮಸ್ಯೆ ಇದೆ. ಇಲ್ಲಿ ಯಾರೂ ಇಲ್ಲ, ಏನು ಮಾತನಾಡುವುದು?

ಶ್ರೀ ಸಿದ್ದರಾಮಯ್ಯ:– ಇಲ್ಲಿ ರಾಜ್ಯಪಾಲರ ಭಾಷಣವನ್ನು ಮಂಡಿಸಿ ಬಿಟ್ಟು ಇಲ್ಲಿ ನೋಡಿ.

ಅಧ್ಯಕ್ಷರು:– ಕರೆಸುತ್ತೇನೆ.

(ಗೊಂದಲ)

ಶ್ರೀ ಆರ್. ರೋಷನ್ ಬೇಗ್:– ಸಿ.ಎಂ. ಇಲ್ಲ, ಡಿ.ಸಿ.ಎಂ. ಇಲ್ಲ, ಮಿನಿಸ್ಟರ್ಸ್ ಇಲ್ಲ, ಚೀಫ್ ಸೆಕ್ರೆಟರಿ ಸಹಾ ಇಲ್ಲ. ಅಲ್ಲಿ ನೋಡಿ, ಯಾರಾದರೂ ಒಬ್ಬರು ಆಫೀಸರ್ ಇದ್ದಾರೆಯೇ? ಚೀಫ್ ಸೆಕ್ರೆಟರಿ ಇಲ್ಲ, ಅಡೀಷನಲ್ ಚೀಫ್ ಸೆಕ್ರೆಟರಿ ಇಲ್ಲ, ಯಾರೇ ಒಬ್ಬರು ಸೆಕ್ರೆಟರಿಯೂ ಇಲ್ಲ.

ಅಧ್ಯಕ್ಷರು:– ಸಚಿವರನ್ನು ಕರೆಸಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಅಶೋಕ್‌ರವರೇ ನೀವು ಡೆಪ್ಯುಟಿ ಚೀಫ್ ಮಿನಿಸ್ಟರ್ ಬಂದಿದ್ದೀರಿ. ಒಬ್ಬ ಅಧಿಕಾರಿಯೂ ಬಂದಿಲ್ಲವಲ್ಲ. ಇಲ್ಲಿ ಸರ್ಕಾರವಿಲ್ಲ.

ಶ್ರೀ ಆರ್. ರೋಷನ್ ಬೇಗ್:– ಅರ್ಧ ಗಂಟೆ ಕಾಲ ಅಡ್ಜರ್ನ್ ಮಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಸರ್ಕಾರ ಇದೆಯೋ, ಇಲ್ಲವೋ ಎನ್ನುವಂಥ ಪರಿಸ್ಥಿತಿ ಇದೆ.

(ಗೊಂದಲ)

ಶ್ರೀ ಆರ್. ಅಶೋಕ್:– ಅಧ್ಯಕ್ಷರೇ, ನೀವು ಶುರು ಮಾಡಿ.

ಶ್ರೀ ಸಿದ್ದರಾಮಯ್ಯ:– ಶುರು ಮಾಡುವುದು ಹೇಗೆ? ಅಧಿಕಾರಿಗಳ್ಯಾರೂ ಇಲ್ಲದಿದ್ದರೆ ಯಾರಿಗೆ ಮಾತನಾಡುತ್ತಾರೆ?

ಅಧ್ಯಕ್ಷರು:– ಅಧಿಕಾರಿಗಳು ಬಂದರು.

(ಗೊಂದಲ)

ಶ್ರೀ ಸೈಯದ್ ಯಾಸಿನ್:– Drinking water ಬಗ್ಗೆ priority ಕೊಡಿ ಸರ್.

(ಗೊಂದಲ)

ಶ್ರೀ ಆರ್. ಅಶೋಕ್:– ಮೊದಲು ನಿಮ್ಮ ಕೇಂದ್ರ ಸರ್ಕಾರ ಕೊಡಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಸುಮ್ಮನೆ ಕಾಟಾಚಾರಕ್ಕೆ ಅಸೆಂಬ್ಲಿ ನಡೆಸುವ ಬದಲು ರಾಜೀನಾಮೆ ಕೊಟ್ಟು ಮನೆಗೆ ಹೋಗಲಿ. ಅವರಿಗೆ ಬಹುಮತವೇ ಇಲ್ಲ, ಅವರಿಗೆ ರಾಜೀನಾಮೆ ಕೊಡಲು ಹೇಳಿ. ಸದನಕ್ಕೆ ಮುಖ್ಯಮಂತ್ರಿಗಳು ಬರುವುದಿಲ್ಲ, ಮಂತ್ರಿಗಳು ಬರುವುದಿಲ್ಲ. ಅಧಿಕಾರಿಗಳು ಬರುವುದಿಲ್ಲ, ಎಂ.ಎಲ್.ಎ. ಗಳು ಬರುವುದಿಲ್ಲ. Where is the Government? ಅವರು ಏಕೆ ಇರಬೇಕು?

ಶ್ರೀ ಎನ್. ಸಂಪಂಗಿ:– ಅವರು ಒತ್ತಾಯದ ಮೇಲೆ ವೆಂಟಿಲೇಟರ್ ಮೇಲೆ ಮಲಗಿಕೊಂಡಿದ್ದಾರೆ.

ಶ್ರೀ ಸಿದ್ದರಾಮಯ್ಯ:– ಸರ್ಕಾರವಿಲ್ಲ, ಆಡಳಿತವೂ ಇಲ್ಲ.

ಅಧ್ಯಕ್ಷರು:– ಮಂತ್ರಿಗಳನ್ನು ಕರೆಸಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ:– ಇವರು ಏಕೆ ಇರಬೇಕು?

ಅಧ್ಯಕ್ಷರು:– ಮುಖ್ಯಮಂತ್ರಿಗಳು ಬಂದರು.

ಶ್ರೀ ಸಿದ್ದರಾಮಯ್ಯ:– ಮುಖ್ಯಮಂತ್ರಿಗಳು ಒಬ್ಬರು ಬಂದರೆ ಸಾಕೇ? ಅಧಿಕಾರಿಗಳು ಬಂದಿದ್ದಾರೆಯೇ? ಇಲ್ಲಿ ಚೀಫ್ ಸೆಕ್ರೆಟರಿಯಿಲ್ಲ.

(ಗೊಂದಲ)

ಅಧ್ಯಕ್ಷರು:– ಬಂದರಲ್ಲ. ಬೇರೆ ಅಧಿಕಾರಿಗಳು ಬಂದರು. ಅವರನ್ನೂ ಕರೆಸೋಣ.

ಶ್ರೀ ಸಿದ್ದರಾಮಯ್ಯ:– ನೀವು ಈ ರೀತಿ ಲಘುವಾಗಿ ತೆಗೆದುಕೊಂಡರೆ ಹೇಗೆ?

ಅಧ್ಯಕ್ಷರು:– ಲಘುವಾಗಿ ತೆಗೆದುಕೊಂಡಿಲ್ಲ. ಅವರನ್ನು ಕರೆದುಕೊಂಡು ಬರಲಿಕ್ಕೆ ಪಾರ್ಲಿಮೆಂಟರಿ ಮಿನಿಸ್ಟರ್‌ರವರನ್ನು ಕಳುಹಿಸಿದ್ದೇನಲ್ಲ. ಕರೆದುಕೊಂಡು ಬನ್ನಿ ಎಂದು ಅವರಿಗೆ ಹೇಳಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:– ಕಾವೇರಿ ನ್ಯಾಯಮಂಡಳಿ ಐತೀರ್ಪು ರಾಜ್ಯಕ್ಕೆ ಮರಣ ಶಾಸನವಾಗುತ್ತದೆ.

ಅಧ್ಯಕ್ಷರು:– ದಯವಿಟ್ಟು ಆಮೇಲೆ ಪ್ರಸ್ತಾಪ ಮಾಡಿ. ಸಂತಾಪ ಸೂಚನೆ ಮಾಡಿ ನಂತರ ಅದನ್ನು ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ. ರೇವಣ್ಣ:– ದಯಮಾಡಿ ನೀವು ಇದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:– ಕೊಡುತ್ತೇನೆ.